# ಪ್ರಶ್ನೆ:

# “ಎಲ್ಲಾ ಸಭೆಗಳಲ್ಲಿ ಕ್ರೈಸ್ತರು ಇರುವರೋ?”

## ಉತ್ತರ:

“ಎಲ್ಲಾ ಸಭೆಗಳಲ್ಲಿ ಕ್ರೈಸ್ತರು ಇರುವರು” ಎಂಬುದು ಪ್ರಸಿದ್ಧವಾದ ಹೇಳಿಕೆಯಾಗಿದೆ. ಆ ಹೇಳಿಕೆಯು ಬೈಬಿಲ್ ಉಲ್ಲೇಖನವಾಗಿದ್ದರೆ, ಎಲ್ಲಾ ಚರ್ಚೆಯನ್ನು ಅಂತ್ಯಗೊಳಿಸುತ್ತಿತ್ತು. ಹಾಗಿದ್ದರೂ, ಕರ್ತನ ದೋಷಾತೀತ ವಾಕ್ಯವು ಅಂಥ ಹೇಳಿಕೆಯನ್ನು ಮಾಡದೇ ಇದ್ದುದ್ದರಿಂದ, ಮನುಷ್ಯನ ಮೋಸಗೊಳಿಸುವಂಥ ವಾಕ್ಯವು ಪರೀಕ್ಷಿಸಲ್ಪಡತಕ್ಕದ್ದು (1 ಥೆಸಲೊನೀಕ 5:21).

ನೀನು ತೀರ್ಮಾನಿಸಿಕೊಂಡಿದ್ದರೆ ಮತ್ತು ಎಲ್ಲಾ ಸಭೆಗಳಲ್ಲಿ ಕ್ರೈಸ್ತರು ಇರುವರೋ ಇಲ್ಲವೋ ಎಂಬುದನ್ನು ಹೊಸದಾಗಿ ಪರೀಕ್ಷಿಸಲು ಮನಸ್ಸಿಲ್ಲದವನಾಗಿದ್ದರೆ, ಆಗ ನಿನ್ನ ಹೃದಯವು ಸರಿಯಾದದ್ದಾಗಿರುವದಿಲ್ಲ. ಪ್ರೇರೇಪಿತ ಪ್ರಸಂಗಿ, ಸ್ತೆಫನನ ಮಾತುಗಳನ್ನು ಕೇಳಿದ ಕೆಲವು ಜನರು ತಾವು ನಂಬದೇ ಇರುವ ಹೇಳಿಕೆಗಳನ್ನು ಕೊಟ್ಟರೆಂದು ದೇವರ ವಾಕ್ಯವು ನಮಗೆ ಹೇಳುತ್ತದೆ. ಈ ಜನರು ಪ್ರಸಂಗಿಯು ಹೇಳಿದ್ದನ್ನು ಪರೀಕ್ಷಿಸುವದನ್ನು ನಿರಾಕರಿಸಿದರು, ಮತ್ತು “ತಮ್ಮ ಹಲ್ಲುಗಳನ್ನು ಕಡಿಯಲು ಪ್ರಾರಂಭಿಸಿದರು.” ಆಗ, “ಅವರು ಮಹಾ ಶಬ್ದದಿಂದ ಕೂಗಿ ಕಿವಿಗಳನ್ನು ಮುಚ್ಚಿಕೊಂಡು ಒಟ್ಟಾಗಿ ಅವನ ಮೇಲೆ ಬಿದ್ದು ಅವನನ್ನು ಊರಹೊರಕ್ಕೆ ನೂಕಿ ಕೊಂಡು ಹೋಗಿ ಕೊಲ್ಲುವದಕ್ಕೆ ಕಲ್ಲೆಸೆದರು; ...” (ಅಪೊಸ್ತಲ ಕೃತ್ಯಗಳು 7:54-58). ಅವರ ಹೃದಯಗಳು ಸರಿಯಾಗಿ ಇರಲಿಲ್ಲ, ಮತ್ತು ದೇವರ ವಾಕ್ಯವನ್ನು ಅಧ್ಯಯನ ಮಾಡುವದನ್ನು ನಿರಾಕರಿಸಿದರೆ ನಿಮ್ಮ ಹೃದಯವೂ ಸರಿಯಾಗಿ ಇರುವದಿಲ್ಲ.

ದೇವರು ಇನ್ನೊಂದು ಜನರ ಗುಂಪಿನ ಬಗ್ಗೆ ನಮಗೆ ಹೇಳುತ್ತಾನೆ, ಅವರು ಪ್ರೇರೇಪಿತ ಪ್ರಸಂಗಿಯನ್ನು ಕೇಳಿ ತಾವು ನಂಬದಿರುವ ಹೇಳಿಕೆಗಳನ್ನು ಕೊಡುವರು, “ದೇವರ ವಾಕ್ಯವನ್ನು ಶುದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತೀ ದಿನವೂ ಪರಿಶುದ್ಧಬರಹಗಳನ್ನು ಶೋಧಿಸುತ್ತಿದ್ದರು” (ಅಪೊಸ್ತಲರ ಕೃತ್ಯಗಳು 17:11). ಅವರ ಹೃದಯಗಳು ಸರಿಯಾಗಿದ್ದವು.

“ಕ್ರೈಸ್ತ” ಎಂಬ ಪದವನ್ನು ನಾವು ಉಪಯೋಗಿಸುವಾಗ ನಾವು ಯಾವುದನ್ನು ಕುರಿತು ಮಾತಾಡುತ್ತಿದ್ದೇವೆ? “ಒಬ್ಬ ಕ್ರೈಸ್ತನು ಒಳ್ಳೇ ವ್ಯಕ್ತಿಯಾಗಿದ್ದಾನೆ” ಎಂದು ಅನೇಕ ಜನರು ಉತ್ತರ ಕೊಡುವರು. “ನನ್ನ ನೆರೆಯವಳು ಯಾವುದೇ ಸಭೆಯ ಸದಸ್ಯಳಾಗಿರದೇ ಇರುವಾಗ, ಆಕೆ ಒಳ್ಳೇ ನೆರೆಯವಳಾಗಿದ್ದಳು. ಆಕೆ ರೋಗಿ ಜನರಿಗೆ ಸಹಾಯ ಮಾಡುವಳು ಮತ್ತು ಈ ಪಟ್ಟಣದಲ್ಲಿ ಆಕೆ ಅತ್ಯುತ್ತಮ ಕ್ರೈಸ್ತ ಮಹಿಳೆಯರಲ್ಲಿ ಒಬ್ಬಳಾಗಿದ್ದಾಳೆ” ಎಂದು ಒಬ್ಬನು ಹೇಳಬಹುದು. ಎಲ್ಲಾ ಸಭೆಗಳಲ್ಲಿ ಕ್ರೈಸ್ತರಿರುವರೋ? ನಿಶ್ಚಯ

ವಾಗಿ ಸಾಮಾನ್ಯವಾಗಿ ಒಬ್ಬ ವ್ಯಕಿಯು ದಯೆಯುಳ್ಳವನು ಮತ್ತು ತನ್ನ ನೆರೆಯವರ ಹಾಗೂ ಇತರರ ಕಡೆಗೆ ಯೋಚನೆಯುಳ್ಳವನು "ಕ್ರೈಸ್ತ"ನಾಗಿದ್ದಾನೆ ಎಂಬುದು ನಿಮ್ಮ ಅರ್ಥವಾಗಿದ್ದರೆ "ಕ್ರೈಸ್ತನು" ಎಂಬ ಆ ನಿರೂಪಣೆ ಅನುಸಾರವಾಗಿ ಎಲ್ಲಾ ಸಭೆ ಗಳಲ್ಲಿ ಕ್ರೈಸ್ತರಿರುವರು, ಎಲ್ಲಾ ಸಭೆಗಳ ಹೊರಗೆ ಕ್ರೈಸ್ತರಿರುವರು ಮತ್ತು ಕ್ರಿಸ್ತನಲ್ಲಿ ನಂಬಿಕೆಯಿಡದ ಕ್ರೈಸ್ತರೂ ಇರುವರು. ದಯೆಯುಳ್ಳ, ದೊಡ್ಡ ಹೃದಯದ ಮೊಹಮ್ಮದೀಯರೂ ಬೌದ್ಧರೂ, ಈ ನಿರೂಪಣೆಯನ್ನು ಸ್ವೀಕರಿಸಲ್ಪಟ್ಟರೆ, ಕ್ರೈಸ್ತರಾಗಿರುವರು.

"ಒಬ್ಬ ಕ್ರೈಸ್ತನು ಕೇವಲ ಒಳ್ಳೆಯ ವ್ಯಕ್ತಿಯಾಗಿರುವದಲ್ಲದೇ, ಅವನು ಕ್ರಿಸ್ತನಲ್ಲಿ ನಂಬಿಕೆಯುಳ್ಳವನೂ ಆಗಿರುವನು" ಎಂದು ಇತರರು ಹೇಳಬಹುದು. ಒಬ್ಬ ಕ್ರೈಸ್ತನ ಬಗ್ಗೆ ಈ ಎರಡನೆಯ ವಿವರಣೆಯು ಹಾಗಿದ್ದರೆ, ಕ್ರೈಸ್ತರು ಎಲ್ಲಾ ಸಭೆಗಳಲ್ಲಿ ಇರುವರೋ? ಕೊಡಲೇ ನಾವು "ಇಲ್ಲ, ಯಾಕಂದರೆ ಯುನಿಟೇರಿಯನ್ ಮತ್ತು ಯೆಹೂದಿ ಸಭೆಗಳು ಕ್ರಿಸ್ತನಲ್ಲಿ ನಂಬಿಕೆಯನ್ನು ಬೋಧಿಸುವದಿಲ್ಲ" ಎಂದು ಹೇಳಬೇಕಾಗುತ್ತದೆ. ಒಬ್ಬನಿಗೆ ಕ್ರೈಸ್ತನಾಗಲು ಕ್ರಿಸ್ತನಲ್ಲಿ ನಂಬಿಕೆಯು ಅಗತ್ಯವಾಗಿದ್ದರೆ, ಆಗ ಯುನಿಟೇರಿಯನ್ ಚರ್ಚ್ ಮತ್ತು ಯೆಹೂದಿ ಸಭೆಯಲ್ಲಿ ಕ್ರೈಸ್ತರು ಇರುವದಿಲ್ಲ.

ನೀವು ಬೈಬಲಿನ ಕಡೆಗೆ ತಿರುಗಿಕೊಂಡರೆ, ಒಬ್ಬ ಕ್ರೈಸ್ತನನ್ನು ಮಾಡಲು ಕ್ರಿಸ್ತನಲ್ಲಿಯ ನಂಬಿಕೆಗಿಂತ ಹೆಚ್ಚಿನದನ್ನು ತೆಗೆದುಕೊಳ್ಳುತ್ತದೆ ಎಂಬುದನ್ನು ಕಂಡುಕೊಳ್ಳುವಿರಿ. ಕ್ರಿಸ್ತನಲ್ಲಿ ನಂಬಿಕೆಯಿಡುವವರಿಗೆ "ದೇವರ ಮಕ್ಕಳಾಗುವ ಹಕ್ಕು ಇರುವುದು" ಅಂದರೆ ಕ್ರೈಸ್ತರಾಗುವ ಹಕ್ಕು ಇರುವುದು - ಆದರೆ ಅವರು ಕೇವಲ ನಂಬುವವರಾಗಿರುವವರೆಗೆ ಅವರು ಕ್ರೈಸ್ತರಾಗಿರುವದಿಲ್ಲ (ಯೋಹಾನ 1:12; 12:42). ಯೇಸುವಿಲ್ಲಿ ನಂಬಿಕೆಯಿಟ್ಟ (ಅಪೊಸ್ತಲರ ಕೃತ್ಯಗಳು 2:36-47) ಆದರೆ ರಕ್ಷಿಸಲ್ಪಡದೇ ಇದ್ದ ಸಾವಿರಾರು ಜನರ ಬಗ್ಗೆ ಬೈಬಲ್ ನಮಗೆ ಹೇಳುತ್ತದೆ. ಅವರು ಮಾನಸಾಂತರ ಪಟ್ಟು ಬಾಪ್ತಿಸ್ಮ ಹೊಂದುವವರೆಗೆ ಕ್ರೈಸ್ತರಾಗಿರಲಿಲ್ಲ. ನಂಬಿಕೆಯಿಟ್ಟು, ಮಾನಸಾಂತರ ಪಟ್ಟು ಮತ್ತು ಬಾಪ್ತಿಸ್ಮ ಹೊಂದಿಕೊಂಡ ಜನರನ್ನು ದೇವರು ರಕ್ಷಿಸಿದನು: ಆ ಶಿಷ್ಯರು "ಕ್ರೈಸ್ತರು" ಎಂದು ಕರೆಯಲ್ಪಟ್ಟರು (ಅಪೊಸ್ತಲರ ಕೃತ್ಯಗಳು 11:16; 26:28; 1 ಪೇತ್ರ 4:16; ನೋಡಿರಿ ಯಾಕೋಬ 2:7). ದೇವರಿಂದ ಪರಿಶುದ್ಧ ಬರಹಗಳು ಒಬ್ಬ ಕ್ರೈಸ್ತನು ನಂಬುವ, ಪಶ್ಚಾತ್ತಾಪ ಪಡುವ ಬಾಪ್ತಿಸ್ಮಹೊಂದಿದ ವ್ಯಕ್ತಿಯೆಂದು ರುಜುವಾತು ಪಡಿಸುವಾಗ, ಎಲ್ಲಾ ಸಭೆಗಳಲ್ಲಿ ಕ್ರೈಸ್ತರು ಇರುವರೋ?

ಸಾವಿರಾರು ಜನರು ಕೆಲವು ಸಭೆಗಳಲ್ಲಿ ನಂಬುವದರಿಂದ ಅಲ್ಲ, ಆದರೆ ಶಿಶುಳಂತೆ ಬಂದಿರುವರು; ಅವು ತಮ್ಮ ತಂದೆತಾಯಿಗಳ ನಂಬಿಕೆಯ ಮೇಲೆ ಆ ಸಭೆಗಳನ್ನು ಪ್ರವೇಶಿಸುವರು. ಬೈಬಲಿನ ಅರ್ಥದಲ್ಲಿ ಕ್ರೈಸ್ತರಿರುವರೋ? ಅವರು ಮಾನಸಾಂತರವಿಲ್ಲದೆ, ತಮ್ಮ ಎಡಗೈಯಿಂದ ಬಲಗೈಯನ್ನು ತಿಳಿಯದೇ ಬಂದರು. ಕ್ರೈಸ್ತರನ್ನು ಬೈಬಲ್ ವಿವರಿಸುವಂತ ಕ್ರೈಸ್ತರು ಇರುವರೋ? ಮುಳುಗೇಳಿಸಲ್ಪಡುವದರ ಬದಲು ಚಿಮುಕಿಸಲ್ಪಡುವದರಿಂದ ಸಾವಿರಾರು ಜನರು ಬಂದಿರುವರು (ರೋಮಾಪುರ 6:4; ಕೊಲೊಸ್ಸೆ 2:12). ಕ್ರೈಸ್ತರ ಬಗ್ಗೆ ತನ್ನ ವಾಕ್ಯದಲ್ಲಿ ದೇವರು ಮಾತಾಡುವಂಥ ಕ್ರೈಸ್ತರು ಅವರಾಗಿರುವರೋ? ಸಾವಿರಾರು ಜನರು, ಮುಳುಗೇಳಿಸಲ್ಪಟ್ಟಿದ್ದರೂ ಕ್ರೈಸ್ತರಾಗಿರುವದಕ್ಕಾಗಿ ಹಾಗೆ ಮಾಡಬೇಕೆಂದು ಕಲಿಸಲ್ಪಟ್ಟಿರುವದಿಲ್ಲ ("ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಹೊಂದಿರಿ" ಅಪೊಸ್ತಲರ ಕೃತ್ಯಗಳು 2:38; "ನಿಮ್ಮ ಪಾಪಗಳನ್ನು ತೊಳೆದುಕೊಳ್ಳಿರಿ" ಅಪೊಸ್ತಲರ ಕೃತ್ಯಗಳು 22:16). ಅವರು ಆಗಲೇ ಕ್ರೈಸ್ತರಾಗಿರುವದರಿಂದ ಬಾಪ್ತಿಸ್ಮ ಹೊಂದಲು ಬೋಧಿಸಟ್ಟಿರುವರು. ಬಾಪ್ತಿಸ್ಮವಿಲ್ಲದೇ ಆಗಲೇ ಅವರ ಪಾಪಗಳು ತೊಳೆಯಲ್ಪಟ್ಟಿರುವವೆಂದು ಅವರು

ಹೇಳಲ್ಪಟ್ಟಿರುವವರು. ದೇವರ ಪುಸ್ತಕವು ಹೇಳುವಂತೆ ಅವರು ಕ್ರೈಸ್ತರಾಗಿರುವರೋ? ಅವರು ಒಳ್ಳೆಯವರು, ನೈತಿಕ ಜನರು ಆಗಿದ್ದಾರೆ. ಅವರು ಯೇಸುವಿನಲ್ಲಿ ನಂಬುವರು ಮತ್ತು ಆತನಿಗಾಗಿ ಕಷ್ಟಪಟ್ಟು ದುಡಿಯುವರು. ಹೀಗಿದ್ದರೂ ಬೈಬಲಿನ ಅರ್ಥದಲ್ಲಿ ಅವರು ಕ್ರೈಸ್ತರಾಗಿರುವರೋ? ಬೈಬಲಿನ ಅರ್ಥದಲ್ಲಿ ಅಲ್ಲದಿದ್ದರೆ, ಯಾವ ಅರ್ಥಧಲ್ಲಿ? ಯಾವುದು ಕ್ರೈಸ್ತನನ್ನು ಮಾಡುತ್ತದೆ ಎಂಬ ವಿವರಣೆಯನ್ನು ಬದಲಾಯಿಸಲು ಜನರಿಗೆ ಯಾವ ಅಧಿಕಾರವಿದೆ?

ಅಪೊಸ್ತಲರ ಕೃತ್ಯಗಳು 2:38ಕ್ಕೆ ವಿಧೇಯರಾಗಿ, ಸಭಾ ಪಂಗಡಗಳನ್ನು ಸೇರಿದ, ಬೈಬಲಿನ ಅರ್ಥದಲ್ಲಿಯ ಕ್ರೈಸ್ತರು ಇದ್ದಾರೆ. ಅವರು ಇನ್ನೂ ಕ್ರೈಸ್ತರಾಗಿರುವರೋ? ಹೌದು, ಆದರೆ ಅವರು ತಪ್ಪಿನಲ್ಲಿ ಹೋಗಿದ್ದಾರೆ. ಗುಂಪುಗಳಲ್ಲಿ ವಿಭಾಗವಾಗಿ ಹೋಗುವುದು ಕ್ರೈಸ್ತರಿಗೆ ತಪ್ಪಾಗಿದೆಯೆಂದು ದೇವರು ನಮಗೆ ಹೇಳುತ್ತಾನೆ (1 ಕೊರಿಂಥ 1:10-13). ಅವರು ಇನ್ನೂ ದೇವರ ಜನಾಂಗವಾಗಿರುವರು ಆದರೆ ದುಃಖಕರವಾದ ತಪ್ಪಿನಲ್ಲಿ ಇರುವರು.

ಬೈಬಲು ವಿವರಿಸುವಂಥ ಕ್ರೈಸ್ತರಂತೆ ಇರುವ ಕ್ರೈಸ್ತರಿದ್ದು, ತಮ್ಮಷ್ಟಕ್ಕೆ ತಾವೇ, ಪರಿಶುದ್ಧ ಬರಹಗಳ ಅಧಿಕಾರವಿಲ್ಲದೇ ತಮ್ಮ ಆರಾಧನೆಗಳಲ್ಲಿ ನಿಲುವಂಗಿಗಳ ಕೊಯರುಗಳನ್ನೂ ಯಾಂತ್ರಿಕ ಸಂಗೀತವನ್ನೂ ಅಳವಡಿಸಿಕೊಂಡಿದ್ದಾರೆ. ಅವರು ಕ್ರೈಸ್ತರೋ? ಹೌದು, ಆದರೆ ಅವರು ಸಭೆಯ ಹಾಡುವಿಕೆಯನ್ನು ಪ್ರದರ್ಶನವಾಗಿ ಬದಲಾಯಿಸಿದ್ದಾರೆ (ಎಫೆಸ 5:19; ಇಬ್ರಿಯ 13:15).

ಇದಲ್ಲದೇ, ಕ್ರೈಸ್ತರನ್ನು ಬೈಬಲು ವಿವರಿಸುವಂಥ ಕ್ರೈಸ್ತರಿದ್ದು ಉಗುರು ಬೆಚ್ಚಗಿನ ಸ್ಥಿತಿಗೆ ಬೆಳೆದು ಆತನ ಆಶೀರ್ವಾದಕರ ಕೆಲಸಕ್ಕೆ ಗಮನ ಕೊಡದವರಾಗಿದ್ದಾರೆ. ಅವರು ಕ್ರೈಸ್ತರೋ? ಹೌದು, ಆದರೆ ದೇವರು ಹೀಗೆ ಹೇಳುತ್ತಾನೆ, “ನಿನ್ನ ಕೃತ್ಯಗಳನ್ನು ಬಲ್ಲೆನು; ನೀನು ತಣ್ಣಗೂ ಅಲ್ಲ; ಬೆಚ್ಚಗೂ ಅಲ್ಲ; ನೀನು ತಣ್ಣಗಾಗಲಿ ಬೆಚ್ಚಗಾಗಲಿ ಇದ್ದರೆ ಒಳ್ಳೇದಾಗಿತ್ತು, ನೀನು ಬೆಚ್ಚಗೂ ಇಲ್ಲದೇ ತಣ್ಣಗೂ ಇಲ್ಲದೇ ಉಗುರುಬೆಚ್ಚಗಿರುವದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು” (ಪ್ರಕಟನೆ 3:15, 16). ಉಗುರು ಬೆಚ್ಚಗಿನ ಕ್ರೈಸ್ತರು ಕರ್ತನನ್ನು ಬೇಸರಗೊಳಿಸುತ್ತಾರೆ.

ಪರಿಶುದ್ಧ ಬರಹಕ್ಕನುಗುಣವಾಗಿ ಮೂರು ಸ್ಥಿತಿಗಳು ತಪ್ಪಾಗಿವೆ ಮತ್ತು ಗಮನಿಸುವ ಅಗತ್ಯತೆಯುಳ್ಳವುಗಳಾಗಿವೆ. (1) ಬೈಬಲು ವಿವರಿಸುವಂಥ ಕ್ರೈಸ್ತರಂತೆ ಕ್ರೈಸ್ತರಾಗಿರದೇ ಇರುವ ಸಭಾಸದಸ್ಯರು ಬೈಬಲು ವಿವರಿಸುವ ಕ್ರೈಸ್ತರಂಥ ಕ್ರೈಸ್ತರನ್ನಾಗಿ ತಮ್ಮನ್ನು ಮಾಡಿಕೊಳ್ಳಬೇಕು. (2) ಬೈಬಲು ವಿವರಿಸುವಂಥ ಕ್ರೈಸ್ತರಂತೆ ಕ್ರೈಸ್ತರಾದ ಸಭಾ ಸದಸ್ಯರು ಮಾನವ ನಿರ್ಮಿತ - ಸಾಂಪ್ರದಾಯಗಳನ್ನು ತಿರಸ್ಕರಿಸತಕ್ಕದ್ದು ಮತ್ತು ಬೈಬಲಿನ ಆರಾಧನೆಯ ಸರಳತೆಗೆ ಹಿಂದಿರುಗತಕ್ಕದ್ದು. (3) ಬೈಬಲ್ ವಿವರಿಸುವ ಕ್ರೈಸ್ತರಂಥ ಕ್ರೈಸ್ತರಾಗಿರುವ ಸಭಾಸದಸ್ಯರು, ಉಗುರು ಬೆಚ್ಚಗಿನ ಸ್ಥಿತಿಗೆ ಬಂದ ತಮ್ಮ “ಪ್ರಥಮ ಸ್ಥಿತಿಗೆ” ಹಿಂದಿರುಗುವ ಅಗತ್ಯತೆಯುಳ್ಳವರಾಗಿದ್ದಾರೆ (ಪ್ರಕಟನೆ 2:4).

## ಆಶ್ಚರ್ಯಕರವಾದ ದೇವರ ಕೃಪೆ[1]

ಮನುಷ್ಯನ ಪಾಪದ ಭಯಾನತಕೆಯು ಯುದ್ಧ, ಅಪರಾಧ, ಆಶೆ, ದ್ವೇಷ ಮತ್ತು ಸ್ವಾರ್ಥತೆಯಲ್ಲಿ ಪ್ರಕಟಿಸಲ್ಪಟ್ಟಿದೆ; ಆದರೆ ಅದು ಅದ್ವಿತೀಯವಾಗಿ ಕಲ್ವಾರಿಯ ಕ್ರೂರ ಸಿಲುಬೆಯಲ್ಲಿ ಚಿತ್ರಿಸಲ್ಪಟ್ಟಿದೆ. ದೇವರ ಆಶ್ಚರ್ಯಕರವಾದ ಕೃಪೆಯು, ಆತನ ಒಲುಮೆಯ ರಕ್ಷಣೆಗಾಗಿ ನಮ್ಮ ಕೇವಲ ನಿರೀಕ್ಷೆಯಾಗಿದೆ. ಹೊಂದಲು ಅಯೋಗ್ಯರಾದ ನಮಗೆ ತನ್ನ ಕೃಪೆಯನ್ನು ಕೊಡುವುದು ಯೋಗ್ಯವಾದದ್ದೆಂದು ನೋಡಿದ ದೇವರಿಗೆ ಕೃತಜ್ಞತೆಗಳು! "ಯಾಕಂದರೆ ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನು ಉಂಟುಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು" (ತೀತ 2:11). ದೇವರ ಪರಿಪೂರ್ಣವಾದ ನ್ಯಾಯವನ್ನು ಕೇಳಿದರೆ, ನಮ್ಮಲ್ಲಿ ಯಾರೂ ರಕ್ಷಿಸಲ್ಪಡಲಾರೆವು!

ಜಗತ್ತು ಸೃಷ್ಟಿಸಲ್ಪಡುವದಕ್ಕಿಂತ ಮಂಚೆಯೇ ಮಾನವನನ್ನು ರಕ್ಷಿಸಲು ದೇವರು ಉದ್ದೇಶಿಸಿದ್ದನು. ಅಬ್ರಹಾಮನಿಗೆ ಅವನ ಸಂತತಿಯ ಮುಖಾಂತರ ಜಗತ್ತು ಆಶೀರ್ವಾದ ಹೊಂದುವುದು ಎಂದು ಆತನು ವಾಗ್ದಾನ ಮಾಡಿದ್ದನು. ಮತ್ತು ಈ ವಾಗ್ದಾನವು ಕ್ರಿಸ್ತನ ಶಿಲುಬೆಯ ಆಶೀರ್ವಾದಗಳಲ್ಲಿ ನೆರವೇರಿತು. ದೇವರ ಕುಮಾರನು ನಮ್ಮ ಪಾಪಗಳನ್ನು ಹೊತ್ತುಕೊಂಡು ಹೋಗುವವನೂ ನಮ್ಮ ಪಾಪಗಳ ಯಜ್ಞವೂ ನಮಗಾಗಿ ಪ್ರಾಯಶ್ಚಿತ್ತವೂ ಆಗಿ ಮಾಡಲ್ಪಟ್ಟನು.

ದೇವರ ಕೃಪೆಯನ್ನು ಸ್ವೀಕರಿಸುವುದು ಕ್ರಿಸ್ತನನ್ನು ನಮ್ಮ ರಕ್ಷಕನಂತೆ, ನಂಬಿಕೆಯಿಂದ, ಸ್ವೀಕರಿಸುವದರ ಮೇಲೆ ಸಂಪೂರ್ಣವಾಗಿ ಅವಲಂಭಿಸಿರುತ್ತದೆ. ಈ ನಂಬಿಕೆಯು ವಿಶ್ವಾಸವನ್ನು, ಭರವಸೆಯನ್ನು, ಅವಲಂಭನೆಯನ್ನು, ಒಪ್ಪಿಸಿಕೊಡುವಿಕೆಯನ್ನು, ಮತ್ತು ವಿಧೇಯತೆಯನ್ನು ಒಳಗೊಂಡಿರುತ್ತದೆ. ನಮ್ಮ ಪರವಾಗಿ ಯಾವ ಅರ್ಹತೆಯನ್ನೂ ಅದು ಒಳಗೊಂಡಿರುವದಿಲ್ಲ. ನಮ್ಮ ಕರ್ತನು ಕೇಳುವದೆಲ್ಲದಕ್ಕೆ, ಪಾಪದಿಂದ ಹಿಂದಿರುಗುವದಕ್ಕೆ, ಕ್ರಿಸ್ತನೊಳಗೆ ಬಾಪ್ತಿಸ್ಮ ಹೊಂದಲಿಕ್ಕೆ, ಪ್ರೀತಿಯಲ್ಲಿ ಮತ್ತು ದಯೆಯಲ್ಲಿ ಇತರರನ್ನು ತಲುಪಲಿಕ್ಕೆ, ಮತ್ತು ಇಡೀ ಲೋಕಕ್ಕೆ ಸುವಾರ್ತೆಯನ್ನು ಪ್ರಸಂಗಿಸಲಿಕ್ಕೆ ನಾವು ಒಪ್ಪಿಕೊಂಡವರೂ ವಿಧೇಯರೂ ಆಗಿರತಕ್ಕದ್ದು. ನಾವು ಎಲ್ಲವನ್ನು ಮಾಡಿದಾಗ್ಯೂ, ನಾವು ರಕ್ಷಣೆಯ ಯಾವುದೇ ಭಾಗವನ್ನು ಸಾಧಿಸಲಾರೆವು. "ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ: ಅದು ಪುಣ್ಯ ಕ್ರಿಯೆಗಳಿಂದ ಉಂಟಾದದ್ದಲ್ಲ; ಆದುದರಿಂದ ಹೋಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ" (ಎಫೆಸ 2:8, 9).

ಟಿಪ್ಪಣಿ

[1]Adapted from F. W. Mattox, "The Amazing Grace of God," *20th Century Christian* 14 (May 1952): 3-5.

© 2009 Truth for Today